ದೇಹವನ್ನೊಬ್ಬರು ಕಿತ್ತು ತಿನ್ನತೊಡಗಿದೆವು. **cannibalism!** ಹಸಿವು ಮತ್ತು ಕಾಮ ಜೀವ ಜಗತ್ತಿನ ನಿಜವಾದ ಸಂಪತ್ತು! ಬಾಬಾ ಧಾತುಸೇನ ಸೆಕ್ಸ್ ಟ್ಯಾಬ್ಲೆಟ್‌ಗಳನ್ನು ನಮ್ಮ ಮೇಲೆಯೇ ಪ್ರಯೋಗ ಮಾಡಿ ಬಿಟ್ಟಿದ್ದ!!! ನಾವು ಹೊರಟು ಬರುವಾಗ ಧಾತುಸೇನರೊಂದಿಗೆ ಕುಡಿದ ಬಿಸಿ ಬಿಸಿ ಚಹದಲ್ಲಿ ಅವರ ಅನುಯಾಯಿ ಟ್ಯಾಬ್ಲೆಟ್‌ಗಳನ್ನು ಬೆರೆಸಿಕೊಟ್ಟಿರುವುದು ಸಾಬೀತಾಗಿತ್ತು. ಕನಸು–ನನಸು, ಅಪ್ರಜ್ಞೆ– ಪ್ರಜ್ಞೆ, ಸತ್ಯ–ಮಿಥ್ಯ, ವಾಸ್ತವ–ಅವಾಸ್ತವ ಸ್ಥಿತಿಗಳಲ್ಲಿ ನಾವು ರಾತ್ರಿ ಪೂರ್ತಿ ಮುಳುಗಿ ಹೋಗಿದ್ದೆವು. ನನ್ನ ಬ್ರೀಫ್‌ಕೇಸ್‌ನಲ್ಲಿ ಸೆಕ್ಸ್ ಟ್ಯಾಬ್ಲೆಟ್‌ನ ಇನ್ನೂ ಎರಡು ಪೌಚ್‌ಗಳಿದ್ದವು. **We are living in the world of canspiracies.** ಬನಾರಸ್ ತುಂಬಾ ಹೊಲಸು ತುಂಬಿ ತುಳುಕಾಡುತ್ತಿದೆ. ಆದ್ದರಿಂದಲೇ ಇಲ್ಲಿ ಗಂಗೆ ಹರಿಯುತ್ತಿರುವುದು. ವಿಶ್ವನಾಥ ನೆಲೆಸಿರುವುದು. ಹೊಲಸು ಇಲ್ಲದಿದ್ದಲ್ಲಿ ಫಲವತ್ತತೆಯೇ ಇರುವುದಿಲ್ಲ. ಹೊಲಸನ್ನೆಲ್ಲ ತನ್ನಲ್ಲಿ ಪ್ರೀತಿಯಿಂದ ತುಂಬಿಕೊಂಡು ಹರಿಯುವುದರಿಂದಲೇ ಗಂಗೆ ಪವಿತ್ರವೆನಿಸಿರುವುದು.

ಮಾರನೆಯ ದಿನ ಸಂಜೆಯವರೆಗೂ ನಾನೂ ಮತ್ತು ನೀಲಾಂಜನ ತಾಜ್‌ಹೋಟೆಲ್‌ನ ಸುಪ್ಪತ್ತಿಗೆಯ ಮೇಲೆ ಪದೇ ಪದೇ ಹಸಿವು ಮತ್ತು ಸುಖದಿಂದ ನರಳಿದ್ದೆವು. ಅಂದು ಸಂಜೆ ದೆಹಲಿಗೆ ವಿಮಾನ ಹತ್ತಿದಾಗ ಒಂದಿಷ್ಟೂ ಭಯವೆನಿಸಲಿಲ್ಲ. ದೆಹಲಿಯಿಂದ ಮತ್ತೆ ಪುಣೆಗೆ ವಿಮಾನ ಹತ್ತಿದೆವು. ಪುಣೆಯಲ್ಲೂ ಎರಡು ದಿನ ಒಟ್ಟಿಗೆ ಇದ್ದೆವು. ಫ್ಯಾಕ್ಟರಿಯ ಉದ್ಘಾಟನಾ ಕಾರ್ಯಕ್ರಮವನ್ನು ಮುಗಿಸಿಕೊಂಡು ಅತ್ಯಂತ ಹುರುಪಿನಿಂದ ನೀಲಾಂಜನ ಹೈದರಾಬಾದ್ ಫ್ಲೈಟ್ ಹತ್ತಿದ್ದಳು. ನಾನು ವಿಮಾನ ನಿಲ್ದಾಣಕ್ಕೆ ಹೋಗಿ ನೀಲಾಂಜನಾಳನ್ನು ಬೀಳ್ಕೊಟ್ಟು ಹಾಗೆಯೇ ಮುಂಬಯಿಯ ವಿಮಾನವನ್ನು ಹತ್ತಿದ್ದೆ. ಸೆಕ್ಸ್ ಟ್ಯಾಬ್ಲೆಟ್ ಮಾರ್ಕೆಟಿಂಗ್ ಮಾಡುವ ಜವಾಬ್ದಾರಿಯನ್ನು ರಾಘವ ಪಂತುಲು ಸಂಪೂರ್ಣವಾಗಿ ನನ್ನ ಮೇಲೆ ಹೊರಿಸಿದ್ದರು. ಪತ್ರಿಕೆ ಮತ್ತು ಟಿ.ವಿ.ಗಳ ಮೂಲಕ ಒಂದು ವಾರವಿಡೀ ಜಾಹೀರಾತುಗಳನ್ನು ನೀಡಿದ್ದೆ. ಮುಂಬಯಿಯಲ್ಲಿ ನಾಲ್ಕು ಡಿಸ್ಟ್ರಿಬ್ಯೂಟರ್‌ಗಳನ್ನು ನೇಮಿಸಿದ್ದೆ. ಒಂದೇ ತಿಂಗಳಲ್ಲಿ ಟ್ಯಾಬ್ಲೆಟ್‌ಗೆ ನಿರೀಕ್ಷೆಗೂ ಮೀರಿದ ಬೇಡಿಕೆ ಶುರುವಾಗಿತ್ತು. ಬೇರೆ ಬೇರೆ ರಾಜ್ಯ ಮತ್ತು ನಗರಗಳಿಂದಲೂ ವಿಪರೀತ ಬೇಡಿಕೆಯುಂಟಾಗಿ ಪೂರೈಸಲು ತಿಣುಕಾಡಬೇಕಾಯಿತು. ಫ್ಯಾಕ್ಟರಿಯ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲಾಯಿತು. ಮೂರೇ ತಿಂಗಳಲ್ಲಿ ಟರ್ನ್ ಓವರ್ ನೂರಾರು ಕೋಟಿಗಳನ್ನು ದಾಟಿತ್ತು. ಈಗ ನಾನು ಪ್ರತಿನಿತ್ಯ ವಿಮಾನಗಳಲ್ಲಿ ತಿರುಗಾಡುತ್ತಿದ್ದೆ. ಮುಂಬಯಿ, ಕೊಲ್ಕತ್ತ ಸ್ಲಂಗಳಲ್ಲಿ ಟ್ಯಾಬ್ಲೆಟ್‌ಗಳು ನೀರಿನಂತೆ ಖರ್ಚಾಗುತ್ತಿದ್ದವು. ಈ ಮಧ್ಯೆ ನೀಲಾಂಜನ ಎರಡು ಮೂರು ಬಾರಿ ಫೋನು ಮಾಡಿದ್ದಳು. ತನ್ನ ಫ್ಯಾಕ್ಟರಿಯ ಉತ್ಪನ್ನವನ್ನು ಸಾವಿರಾರು ಎಕರೆ ಭತ್ತದ ಗದ್ದೆಗಳಿಗೆ ಬಳಸಿರುವುದಾಗಿ, ಇನ್ನೆರಡು ಮೂರು ತಿಂಗಳಲ್ಲಿ ಅದರ ಅದ್ಭುತ ಫಲವನ್ನು ನಿರೀಕ್ಷಿಸುತ್ತಿರುವುದಾಗಿ ಖುಷಿಯಿಂದ ಹೇಳಿದ್ದಳಲ್ಲದೆ ತನ್ನ ಎರಡನೆಯ ಅಣ್ಣ ಮೂರನೆ ಬಾರಿ ಚುನಾವಣೆ ಗೆದ್ದಿದ್ದಾಗಿ ಮತ್ತು ಆತನಿಗೆ ಮದುವೆ ಆಗಿದ್ದಾಗಿಯೂ, ತನ್ನಪ್ಪ ಈಗ ಖುಷಿಯಾಗಿರುವುದಾಗಿಯೂ ಸಂಭ್ರಮ ಪಟ್ಟಿದ್ದಳು. ಅವಳನ್ನೊಮ್ಮೆ ಭೇಟಿಯಾಗಬೇಕೆನಿಸಿದ್ದರೂ ವ್ಯಾಪಾರದ ಬಿಜಿಯಿಂದಾಗಿ ಸಾಧ್ಯವಾಗಿರಲಿಲ್ಲ. ಈ ಮಧ್ಯೆ ಎರಡು ಬಾರಿ ವಿದೇಶಗಳನ್ನೂ ಸುತ್ತಿ ಬಂದಿದ್ದೆ, ಸಾಧ್ಯವಾದರೆ ವಿದೇಶದಲ್ಲೂ ಟ್ಯಾಬ್ಲೆಟ್‌ನ ಮಾರ್ಕೆಟಿಂಗ್ ಮಾಡಬೇಕೆಂಬ ಆಲೋಚನೆಯಿಂದ. ನಾನು ಮುಂಬಯಿಯ ತಾಜ್ ಹೋಟೆಲಿನ ಪರ್ಮನೆಂಟ್ ಗಿರಾಕಿಯಾಗಿದ್ದೆ.

ಅಂದು ನಾನು ಜಾಸ್ಮಿನ್ ಫೆರ್ನಾಂಡಿಸ್‌ಳೊಂದಿಗೆ ತಾಜ್ ಮಹಲ್ ಪ್ಯಾಲೇಸ್